ಏಕೆಂದರೆ ಅಲ್ಲಿ ಮೂಲ ಸೌಲಭ್ಯಗಳಾದ ಡಾಕ್ಟರ್‌ನ್ನು ಕೊಟ್ಟಿದ್ದೀರಿ, ಟೆಲಿಮೆಡಿಸಿನ್ ಕೊಟ್ಟಿದ್ದೀರಿ ಆ ಆಸ್ಪತ್ರೆ ತುಂಬಾ ಚೆನ್ನಾಗಿದೆ ಆದುದರಿಂದ ಬ್ಲಡ್ ಬ್ಯಾಂಕ್‌ನ ಸೌಲಭ್ಯವನ್ನು ತಾವು ಒದಗಿಸಿಕೊಟ್ಟರೆ ಖಂಡಿತ ನಮ್ಮ ಕ್ಷೇತ್ರದ ಜನರಿಗೆ ಒಳ್ಳೆಯದಾಗುತ್ತದೆ ಎನ್ನುವ ದೃಷ್ಟಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೇ, ಈಗಾಗಲೇ ಶಿವಮೊಗ್ಗ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಇದೆ ಆದರೆ ಬ್ಲಡ್ ಸ್ಟೋರೇಜ್‌ನ್ನು ಸಾಗರ ಆಸ್ಪತ್ರೆಯಲ್ಲಿ ನಾವು ಮಾಡಿದ್ದೇವೆ ಆದರೂ ನಿಮ್ಮ ಕ್ಷೇತ್ರದಲ್ಲಿ ಬ್ಲಡ್ ಬ್ಯಾಂಕ್ ಮಾಡಬೇಕೆಂದು ಮನವಿಯನ್ನು ನಮ್ಮಲ್ಲಿ ಮಾಡಿಕೊಂಡಿದ್ದೀರಿ ಅದನ್ನು ನಾವು ಆದ್ಯತೆ ಮೇಲೆ ಪರಿಶೀಲನೆಯನ್ನು ಮಾಡಬೇಕಾಗುತ್ತದೆ ಏಕೆಂದರೆ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಬ್ಲಡ್ ಬ್ಯಾಂಕ್‌ನ್ನು ಮಾಡಲಾಗಿದೆ ಕೆಲವು ತಾಲ್ಲೂಕುಗಳ ಮಟ್ಟಕ್ಕೂ ಹೋಗಬೇಕೆನ್ನುವ ಉದ್ದೇಶ ನಮಗೂ ಇದೆ ಇದಲ್ಲದೇ ನಮ್ಮ ಉದ್ದೇಶ ಇರತಕ್ಕಂಥಾದ್ದು ಹೆರಿಗೆ ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಬಹಳ ಇರುವುದರಿಂದ ಎಲ್ಲೆಲ್ಲಿ ನಮ್ಮ ಪ್ರಾಥಮಿಕ ಆರೋಗ್ಯಗಳಿಗೆ ಮೇಲ್ಪಟ್ಟು, ಅಂದರೆ ಸಿ ಹೆಚ್ ಸಿ ಗಳು ಬರುತ್ತದೆ, ತಾಲ್ಲೂಕು ಆಸ್ಪತ್ರೆಗಳು ಬರುತ್ತವೆ, ಈಗಾಗಲೇ ಅಂಥ ತಾಲ್ಲೂಕು ಆಸ್ಪತ್ರೆಗಳಲ್ಲಿ ಬ್ಲಡ್ ಸ್ಟೋರೇಜ್‌ಗಳನ್ನು ನಾವು ಮಾಡಿದ್ದೇವೆ ಇದನ್ನು ಸಿ ಹೆಚ್ ಸಿ ಗಳಿಗೂ ತೆಗೆದುಕೊಂಡು ಹೋಗಬೇಕು ಎನ್ನುವುದು ಇದೆ ಇದನ್ನು ಸಿ ಹೆಚ್ ಸಿ ಗಳಲ್ಲೂ ಕೂಡ ಬ್ಲಡ್ ಸ್ಟೋರೇಜ್‌ಗಳನ್ನು ಮಾಡುವುದಕ್ಕೆ ನಾವು ವ್ಯವಸ್ಥೆಯನ್ನು ಮಾಡುತ್ತೇವೆ

ಇನ್ನು ತಾವೇನು ಕೇಳಿದ್ದೀರಿ ಅದರ ಅವಶ್ಯಕತೆ ಬಗ್ಗೆ ಪರಿಶೀಲನೆಯನ್ನು ಮಾಡಿ ಅಲ್ಲಿ ಬ್ಲಡ್ ಬ್ಯಾಂಕ್ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದರ ಬಗ್ಗೆ ಪರಿಶೀಲನೆಯನ್ನು ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ

ಕಿಮ್ಸ್ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 231(1617)
ಸದಸ್ಯರ ಹೆಸರು ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ)
ಉತ್ತರಿಸುವ ಸಚಿವರು ಶ್ರೀ ಡಾ॥ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರೋಗಿಗಳು ದಾಖಲಾಗುತ್ತಿರುವುದರಿಂದ ಈಗಿರುವ ಹಾಸಿಗೆಗಳೊಂದಿಗೆ ಇನ್ನೂ 300 ಹಾಸಿಗೆಗಳನ್ನು ಹೆಚ್ಚಿಸುವ ವಿಚಾರ ಸರ್ಕಾರದ ಮುಂದಿದೆಯೇ,

ಹೌದು

ಆ) ಈ ಆಸ್ಪತ್ರೆಯಲ್ಲಿ ಇನ್ನೂ 6 ಶಸ್ತ್ರ ಚಿಕಿತ್ಸಾ ಕೊರಡಿಗಳನ್ನು ಕಲ್ಪಿಸುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ,

ಹೌದು

ಇ) ಬಂದಿದ್ದಲ್ಲಿ, ಇದಕ್ಕೆ ತಗಲುವ ಅಂದಾಜು ಮೊತ್ತವೆಷ್ಟು,

ಅಂದಾಜು ರೂ 10 ಕೋಟಿ

ಈ) ಸರ್ಕಾರ ಈವರೆಗೆ ಬಿಡುಗಡೆ ಮಾಡಿದ ಹಣವೆಷ್ಟು? (ವಿವರ ಒದಗಿಸುವುದು)

ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಈ ಸಾರಿ ನಮ್ಮ ಭಾಗದ ಕಿಮ್ಸ್ ಆಸ್ಪತ್ರೆಗೆ 100 ಕೋಟಿ ರೂಪಾಯಿಗಳ ಗ್ರ್ಯಾಂಟ್ ಕೊಡುತ್ತೇವೆಂದು ಬಜೆಟ್‌ನಲ್ಲಿ ತೋರಿಸಿದ್ದಾರೆ ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಆದರೆ ಕೆಲವು ಪ್ರಶ್ನೆಗಳನ್ನು ನಾನು ಕೇಳಿದ್ದೇನೆ ಅದರಲ್ಲಿ 6 ಶಸ್ತ್ರ ಚಿಕಿತ್ಸಾ ಕೊರಡಿಗಳ ವಿಷಯ ಅವರ ಗಮನಕ್ಕೂ ಬಂದಿದೆ ಮುಂದಿನ ವರ್ಷ ತಾವು ಗೋಲ್ಡನ್ ಜ್ಯುಬಿಲಿ ಫಂಕ್ಷನ್ ಮಾಡುವುದಕ್ಕೆ ಹೊರಟಿದ್ದೀರಿ ಅದಕ್ಕಿಂತ ಮೊದಲು 6 ಶಸ್ತ್ರ ಚಿಕಿತ್ಸಾ ಕೊರಡಿಗಳನ್ನು ಮಾಡಬೇಕು ಇವುಗಳನ್ನು ಮಾಡಿ ಗೋಲ್ಡನ್ ಜ್ಯುಬಿಲಿ ಫಂಕ್ಷನ್ ಮಾಡಿದರೆ ಉತ್ತಮವೆಂದು ನನಗೆ ಅನ್ನಿಸುತ್ತಿದೆ ಈ ಕಿಮ್ಸ್ ಆಸ್ಪತ್ರೆ ಉತ್ತರ ಕರ್ನಾಟಕದ ಭಾಗದಲ್ಲಿಯೇ ಅತಿ ದೊಡ್ಡ ಆಸ್ಪತ್ರೆ. ಇದು 50 ವರ್ಷದಿಂದ ಇದೆ ಇವೊತ್ತಿನ ಪರಿಸ್ಥಿತಿಯಲ್ಲಿ ನೋಡುವುದಾದರೆ ಪ್ರತಿ ದಿವಸ ಎರಡು ಸಾವಿರದಿಂದ ಎರಡೂವರೆ ಸಾವಿರ ಪೇಶೆಂಟ್‌ಗಳು ಆಸ್ಪತ್ರೆಗೆ ಬರುತ್ತಾರೆ ಆದರೆ ಆಸ್ಪತ್ರೆಯಲ್ಲಿ ಕೇವಲ 1200 ಬೆಡ್‌ಗಳು ಮಾತ್ರ ಇವೆ ನಾನೇ ಇತ್ತೀಚೆಗೆ ಹೋಗಿ ನೋಡಿದ್ದೇನೆ, ಕನಿಷ್ಟ ಏಳೆಂಟು ನೂರು ರೋಗಿಗಳು ನೆಲದ ಮೇಲೆಯೇ ಮಲಗಿಕೊಳ್ಳುತ್ತಾರೆ 300 ಬೆಡ್‌ಗಳ ವಿಚಾರ ನಿಮ್ಮ ಗಮನಕ್ಕೆ ಬಂದಿದೆ ಇದನ್ನು ಯಾವಾಗ ತಾವು ಮಾಡಿಸುತ್ತೀರಿ ಎಂಬುದು ಒಂದು ವಿಚಾರ ಇನ್ನು ಎರಡನೆಯದಾಗಿ ಅಲ್ಲಿ ಸುತ್ತಮುತ್ತಲಿನ ಭಾಗಗಳಲ್ಲಿ ಬಹಳಷ್ಟು ಅಪಘಾತಗಳಾಗಿ ಬಹಳಷ್ಟು ರೋಗಿಗಳು ಇದ್ದಾರೆ ಆದರೆ ಅದಕ್ಕೆ ಚಿಕಿತ್ಸೆ ಇಲ್ಲದಿರುವುದರಿಂದ, ಆ ತರಹದ ಸೌಲಭ್ಯ ಅಲ್ಲಿ ಇಲ್ಲದಿರುವುದರಿಂದ ಅವರು ಸಾಯುತ್ತಿದ್ದಾರೆ ಆದುದರಿಂದ ಇದರ ಬಗ್ಗೆಯೂ ಒಂದು ಸೆಟಪ್ ಅನ್ನು ಗೋಲ್ಡನ್

ಜ್ಯುಬಿಲಿಗೆ ಮುಂಚೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ ಇನ್ನು ಮೂರನಯದಾಗಿ ಈ ಟ್ರಾಮಾ ಸೆಂಟರ್ ವಿತ್ ಎಂಆರ್ಐ ಮಿಶನ್ ಸೌಲಭ್ಯ ನಮ್ಮ ಸುತ್ತಮುತ್ತಲೂ ಎಲ್ಲಿಯೂ ಇಲ್ಲವೇ ಇಲ್ಲ ವೈದ್ಯಕೀಯ ಶಿಕ್ಷಣದೊಳಗೆ ವಿಶೇಷವಾಗಿ ಡಾಕ್ಟರ್‌ಗಳು ಯಾವ ರೀತಿ ಇದ್ದಾರೆಂದರೆ ಈ ಮೆಶಿನ್‌ಗಳು, ಇನ್‌ಸ್ಟ್ರುಮೆಂಟ್ಸ್‌ಗಳು ಇಲ್ಲವೆಂದರೆ ಅವರ ತಲೆಯೊಳಗೆ ಏನೂ ಹೋಗುವುದಿಲ್ಲ ಮೊದಲೇ ಎಲ್ಲವನ್ನೂ ಇವುಗಳ ಮೂಲಕ ಚೆಕಪ್ ಮಾಡಿಕೊಂಡು ಬರಬೇಕು, ಆಮೇಲೆ ಅದನ್ನು ನೋಡಿಕೊಂಡು ಚಿಕಿತ್ಸೆ ಕೊಡುವುದು ಆದರೆ ಅಷ್ಟು ದೊಡ್ಡ ಆಸ್ಪತ್ರೆಯೊಳಗೆ ಇಂಥ ಯಾವುದೇ ಸವಲತ್ತು ಇಲ್ಲ ಆದುದರಿಂದ ಎಂಆರ್ಐ ಸೆಂಟರ್ ಸೆಟಪ್ ತಾವು ಮಾಡಬೇಕು ಇನ್ನು ಬಜೆಟ್‌ನಲ್ಲಿ 100 ಕೋಟಿಯೊಳಗೆ ಕೇವಲ 20 ಕೋಟಿ ರೂಪಾಯಿಗಳನ್ನು ಈ ವರ್ಷ ಕೊಡುತ್ತೇವಂದು ಹೇಳಿದ್ದೀರಿ ವರ್ಷ ವರ್ಷ 20 ಕೋಟಿ ಎಂದು ಹೇಳಿದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ ಆದುದರಿಂದ ನಾನು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳುವುದೇನೆಂದರೆ 50 ಕೋಟಿ ರೂಪಾಯಿಗಳನ್ನಾದರೂ ಗೋಲ್ಡನ್ ಜ್ಯುಬಿಲಿ ಆಚರಿಸುವ ಮೊದಲೇ ತಾವು ಕೊಟ್ಟರೆ ನಮ್ಮ ಭಾಗಕ್ಕೆ ತಾವು ಸಹಾಯ ಮಾಡಿದಂತಾಗುತ್ತದೆ ಎಂದು ನಾನು ತಮ್ಮನ್ನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ

ಡಾ ವಿ ಎಸ್ ಆಚಾರ್ಯ(ವೈದ್ಯಕೀಯ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಕೆಲವು ವಿಷಯಗಳನ್ನು ಹೇಳಿದರೋ ಆ ಬಗ್ಗೆ ನನ್ನ ಸಹಮತಿ ಇದೆ ನಾನು ಹೇಳುವುದನ್ನು ಕೇಳುವುದಕ್ಕೆ ಅವರಿಗೆ ಸಂತೋಷವಾಗಬಹುದು ಅಲ್ಲೊಂದು Cathlab ಅದೇ ರೀತಿ Trauma Centre ಮತ್ತು Specialist Ward Centre ಇವೆಲ್ಲವನ್ನೂ ಮಾಡಬೇಕೆಂದು ದೃಷ್ಟಿಯಲ್ಲಿಟ್ಟುಕೊಂಡು ಸುಮಾರು 102 ಕೋಟಿ ರೂಪಾಯಿಗಳ ಒಂದು ಅಂದಾಜು ಪತ್ರವನ್ನು ತಯಾರಿಸಿ ಅದರಂತೆ ಮೊನ್ನೆ ಬಜೆಟ್‌ನಲ್ಲಿ ನಮ್ಮ ಇಲಾಖಾ ಬೇಡಿಕೆಯಂತೆ ಸುಮಾರು 100 ಕೋಟಿ ರೂಪಾಯಿಗಳಿಗೆ ಅವರು ಒಪ್ಪಿದ್ದಾರೆ ಪ್ರಥಮ ಹಂತದಲ್ಲಿ ಸುಮಾರು 20 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡುತ್ತಾರ ತಾವು ಹೇಳಿದ ಪ್ರಕಾರ cathlab ಬಂದ ನಂತರ MRI ಬರುತ್ತದೆ ಈಗಾಗಲೇ ಅಲ್ಲಿ C T scan ಬಂದಿದೆ ಒಂದು Trauma center ತಾವೇನು ಕೇಳಿದ್ದೀರಿ, ಅದೂ ಕೂಡ ಇದರಲ್ಲಿ ಅಂತರ್ಗತವಾಗಿದೆ Trauma center ಎಂದರೆ multi discipline specialities, ಅದು Neuro surgeon, neuro physician, orthopaedic surgery ಮತ್ತು general surgery ಇಂಥದೆಲ್ಲಾ

ಬಲಪಡಿಸಬೇಕಾಗುತ್ತದೆ Trauma is unplanned torture ಹಾಗಾಗಿ ಬೇರೆ ಬೇರೆ ಇಲಾಖೆಯ specialist ಗಳು ಬೇಕಾಗುತ್ತದೆ ಅದನ್ನೆಲ್ಲಾ ಮಾಡುವುದಕ್ಕೆ 20 ಕೋಟಿ ರೂಪಾಯಿ ಎಂದು ಬೇಕು ಹೇಳಿದ್ದಾರೆ ಕೆಲಸ ಮುಂದುವರೆದ ಹಾಗೆ supplementaryನಲ್ಲಿ ಕೊಡುವುದಕ್ಕೆ ಅವಕಾಶ ಇದೆ ತಾವು ಏನು ಹೇಳಿದ್ದೀರಿ, ಎಲ್ಲಾ ವಿಚಾರಗಳ ಬಗ್ಗೆ ಗಮನಹರಿಸುತ್ತಿದ್ದು, ಈಗಾಗಲೇ ನಾನು ಆರೇಳು ಬಾರಿ ಹುಬ್ಬಳ್ಳಿಯ KIMS College ಗೆ ಭೇಟಿ ಕೊಟ್ಟಿದ್ದೇನೆ ಅದು ತಮಗೂ ಗೊತ್ತಿದೆ ನಾನು ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೂಡ ಇದ್ದರು ಹಾಗಾಗಿ ಹುಬ್ಬಳ್ಳಿಯ ಒಂದು ಪ್ರತಿಷ್ಠಿತ ವೈದ್ಯಕೀಯ ಶಿಕ್ಷಣ ಹಾಗೂ ಚಿಕಿತ್ಸಾ ಸಂಸ್ಥೆಯಾದಂತಹ KIMC up gradation ಗೆ ಮತ್ತು ಅದಕ್ಕೆ ಕೊಡಬೇಕಾದಂತಹ ಕಾಯಕಲ್ಪವನ್ನು ಕೊಡುವುದಕ್ಕೆ ನಮ್ಮ ಎಲ್ಲಾ ಪ್ರಯತ್ನ ನಡೆಯುತ್ತದೆ ಆ ದಿಸೆಯಲ್ಲಿ ಯಾವ ರೀತಿಯಲ್ಲಿ ಹಣದ ಆಡಚಣೆ ಆಗುವುದಿಲ್ಲವೆಂದು ತಮ್ಮ ಮುಖಾಂತರ ನಾನು ಅವರಿಗೆ ಹೇಳಬಯಸುತ್ತೇನೆ

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ ನಾನು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ನನ್ನ ಅಭಿನಂದನೆ ಸಲ್ಲಿಸುತ್ತೇನೆ

ಕೈ ಗಡಿಯಾರಗಳ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 232(1603)
ಸದಸ್ಯರ ಹೆಸರು ಶ್ರೀ ರಾಜೇಂದ್ರನ್ ಎಸ್ (ಕೆ ಜಿ ಎಫ್)
ವಿಷಯ ರಿಸ್ಟ್ ವಾಚುಗಳನ್ನು ವಿತರಿಸಿರುವ ಬಗ್ಗೆ
ಉತ್ತರಿಸುವ ಸಚಿವರು ಶ್ರೀ ಬಾಲಚಂದ್ರ ಜಾರಕಿ ಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಮಾನ್ಯ ಮುಖ್ಯಮಂತ್ರಿಗಳ ಜನ್ಮದಿನದ ಅಂಗವಾಗಿ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ವಿತರಿಸಿರುವ ಕೈ ಗಡಿಯಾರಗಳ ಸಂಖ್ಯೆ ಎಷ್ಟು?

ಮಾನ್ಯ ಮುಖ್ಯಮಂತ್ರಿಗಳ ಜನ್ಮ ದಿನದ ಅಂಗವಾಗಿ ಡಾ, ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಕೈ ಗಡಿಯಾರಗಳನ್ನು ವಿತರಿಸಿರುವುದಿಲ್ಲ

ಆ) ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತವೆಷ್ಟು,

ಉದ್ಭವಿಸುವುದಿಲ್ಲ

ಇ) ಈ ಕೈ ಗಡಿಯಾರಗಳನ್ನು ಯಾರಿಗೆ ವಿತರಿಸಲಾಗಿದೆ? (ವ್ಯಕ್ತಿಗಳ ಪಟ್ಟಿಯನ್ನು ಒದಗಿಸುವುದು)

ಉದ್ಭವಿಸುವುದಿಲ್ಲ